ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

**ಸಿ.ಸಿ.ನಂಃ 492/17**

ಪಿಡಬ್ಲ್ಯುಃ - 3
ಸಿಡಬ್ಲ್ಯುಃ - 22

ದಿನಾಂಕಃ 04.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | - | ವೆಂಕಟೇಶ ಬಿ. ಎಸ್ |
| ತಂದೆಯ ಹೆಸರು | - | ಲೇಟ್ ಸುಬ್ಬಣ್ಣ |
| ವಯಸ್ಸು | - | 53 ವರ್ಷ |
| ವೃತ್ತಿ | - | ಆರಕ್ಷಕ ಉಪ ನಿರೀಕ್ಷಕರು, ಮಂಡ್ಯ ಪೂರ್ವ ಪೊಲೀಸ್ ಠಾಣೆ |
| ವಾಸಸ್ಥಳ | - | ಮಂಡ್ಯ |

**ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ**

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ-

ನಾನು ದಿಃ 26.05.2016 ರಿಂದ 26.07.2017 ರವರೆಗೆ ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ26.05.2016 ರಂದು ಈ ಪ್ರಕರಣದ ಕಡತವನ್ನು ಚಾಸಾ-21 ರವರಿಂದ ಪಡೆದುಕೊಂಡು, ಕಡತವನ್ನು ಪರಿಶೀಲಿಸಿ, ತನಿಖೆಯನ್ನು ಮುಂದುವರೆಸಿರುತ್ತೇನೆ. ದಿಃ03.06.2016 ರಂದು ಈ ಪ್ರಕರಣದ ಆರೋಪಿಯಾದ ಬಿ. ಎಸ್ ಉಷಾರವರನ್ನು ಅಭಿಯೋಗಗೊಳಿಸಲು ಸಾಧ್ಯವಿಲ್ಲ ಎಂದು ಜಿಲ್ಲಾಧಿಕಾರಿಗಳು, ಮಡಿಕೇರಿಯವರು ನೀಡಿದ ಪತ್ರವನ್ನು ಸ್ವೀಕರಿಸಿ ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ11.09.2016 ರಂದು ಚಾಸಾ-10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ02.01.2017 ರಂದು 2 ನೇ ಆರೋಪಿಯಾಗಿದ್ದ ಬಿ. ಎಸ್. ಉಷಾರವರನ್ನು ಪಾರಾಣೆ ವೃತ್ತಕ್ಕೆ ವೃತ್ತ ಲೆಕ್ಕಾಧಿಕಾರಿಯಾಗಿ ನೇಮಿಸಿದ ಬಗ್ಗೆ ಆದೇಶದ ಪತ್ರವನ್ನು ನೀಡಬೇಕೆಂದು ತಹಶೀಲ್ದಾರ್ ಮಡಿಕೇರಿ ರವರಿಗೆ ಪತ್ರ ಬರೆದಿರುತ್ತೇನೆ. ದಿಃ

10.03.2017 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-2 ಮತ್ತು 4 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 08.05.2017 ರಂದು 2 ನೇ ಆರೋಪಿ ಉಷಾರವರನ್ನು ಉಷಾರವರನ್ನು ಪಾರಾಣೆ ವೃತ್ತಕ್ಕೆ ವೃತ್ತ ಲೆಕ್ಕಾಧಿಕಾರಿಯಾಗಿ ನೇಮಿಸಿದ ಬಗ್ಗೆ ಆದೇಶದ ಪತ್ರವನ್ನು ಮಡಿಕೇರಿ ತಹಶೀಲ್ದಾರ್ ರವರಿಂದ ಪಡೆದುಕೊಂಡಿರುತ್ತೇನೆ. ಈ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಆರೋಪಿಯ ವಿರುದ್ಧ ಧೋಷಾರೋಪಣಾ ಪಟ್ಟಿ ಸಲ್ಲಿಸಿಕೊಂಡಿರುತ್ತೇನೆ.

ದಿಃ31.05.2016 ರಂದು ಜಿಲ್ಲಾಧಿಕಾರಿಗಳು, ಮಡಿಕೇರಿಯವರು ನೀಡಿದ ಪತ್ರದ ನಕಲನ್ನು ಸಾಕ್ಷಿಯು ಹಾಜರು ಪಡಿಸಿದ್ದು, ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಆರೋಪಿ ಗೈರು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ., ಮಡಿಕೇರಿ.**